ಇ) ಒಂದು ವೇಳೆ ಈ ವರ್ಷದಲ್ಲಿ ಯೋಜನೆಯಲ್ಲಿ ತೆಗೆದುಕೊಂಡಿರುವ ತಾಂಡಗಳಾಗಲೀ ಹರಿಜನ ಬಸ್ತಿಗಳಾಗಲೀ ಮಂಜೂರಾಗದೇ ಉಳಿದಿದ್ದರೆ ಇದಕ್ಕೆ ಕಾರಣಗಳೇನು?

ಈ) ಈ ಸೇಡಂ ತಾಲ್ಲೂಕಿನಲ್ಲಿ ಎಲ್ಲಾ ತಾಂಡಾಗಳಿಗೆ 1990-91 ನೇ ಸಾಲಿನಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡುವ ವ್ಯವಸ್ಥೆಯಾಗಬಹುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ವಿದ್ಯುಚ್ಛಕ್ತಿ ಸರಬರಾಜು ಆದೇ ಉಳಿದಿರುವ ತಾಂಡಾಗಳ ಸಂಖ್ಯೆ : 44. ಈ ತಾಲ್ಲೂಕಿನಲ್ಲಿ ಯಾವುದೇ ಹರಿಜನ ಬಸ್ತಿಯು ವಿದ್ಯುದ್ದೀಕರಣಕ್ಕಾಗಿ ಬಾಕಿ ಉಳಿದಿರುವುದಿಲ್ಲ.

ಆ) ಉದಗಿತಾಂಡ ಮತ್ತು ಸೇಡಂ ತಾಂಡ.

ಇ) ಈ ತಾಲ್ಲೂಕಿನಲ್ಲಿ ಬಾಕಿ ಉಳಿದಿರುವ 42 ತಾಂಡಾಗಳನ್ನು ವಿದ್ಯುದ್ದೀಕರಿಸಲು ತಗಲುವ ಅಂದಾಜು ವೆಚ್ಚ ಪ್ರತೀ ತಾಂಡಾಕ್ಕೂ ರೂ. 40,000 ವನ್ನು ಮೀರುತ್ತದೆ. ಆದ್ದರಿಂದ, ಈ ತಾಂಡಾಗಳನ್ನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಂತ ಹಂತವಾಗಿ ವಿದ್ಯುದ್ದೀಕರಿಸಲು ಉದ್ದೇಶಿಸಿದೆ. 'ಆ' ಕ್ಕೆ ನೀಡಿರುವ ಉತ್ತರದಿಂದ ಹರಿಜನ ಬಸ್ತಿಗಳ ವಿದ್ಯುದ್ದೀಕರಣದ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಬಾಕಿ ಉಳಿದಿರುವ ತಾಂಡಾಗಳನ್ನು ಹೈದರಾಬಾದ್ - ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಂತ ಹಂತವಾಗಿ ವಿದ್ಯುದ್ದೀಕರಿಸಲು ಉದ್ದೇಶಿಸಿದೆ.

ಕರ್ನಾಟಕ ಸಾಬೂನು ಕಾರ್ಖಾನೆಯ ಲಾಭ ನಷ್ಟದ ವಿವರ

1031 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸಾಬೂನು ಕಾರ್ಖಾನೆಯ ಕಳೆದ ಮೂರು ವರ್ಷಗಳಲ್ಲಿನ ಲಾಭ ನಷ್ಟಗಳ ವಿವರವೇನು ವರ್ಷವಾರು ಮಾಹಿತಿ ತಿಳಿಸಿ?

ಆ) ಸದರಿ ಕಂಪನಿಯ ವಿಸ್ತರಣೆಯ ಜವಾಬ್ದಾರಿಯನ್ನು ಬೇರೊಂದು ಕಂಪನಿಗೆ ವಹಿಸಿದ್ದು ನಿಜವೆ?

ಇ) ಜವಾಬ್ದಾರಿ ವಹಿಸಿಕೊಂಡಿದ್ದ ಕಂಪನಿಯು ವಹಿಸಿಕೊಂಡಿದ್ದ ಕೆಲಸವನ್ನು ಸಂಪೂರ್ಣವಾಗಿ ಪೂರೈಸಿದೆಯೆ?

ಈ) ಯಾವ ವರ್ಷದಿಂದ ಹೆಚ್ಚು ನಷ್ಟ ಅನುಭವಿಸಲು ಪ್ರಾರಂಭವಾಯಿಸುದಾಗೂ ಇದುವರೆಗೆ ಅನುಭವಿಸಿರುವ ನಷ್ಟವೆಷ್ಟು?

ಉ) ಕಂಪನಿಯ ಪುನರ್ಜೀವನ ಸಂಪೂರ್ಣ ಆಗಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 1987-88 ರಿಂದ 1989-90 ರವರೆಗಿನ 3 ವರ್ಷಗಳ ಕರ್ನಾಟಕ ಸಾಬೂನು ಮತ್ತು ಮಾರ್ಜಿಕ ನಿಯಮದಲ್ಲಿ ಸಂಭವಿಸಿರುವ ನಷ್ಟ ಈ ಕೆಳಕಂಡಂತಿದೆ:

ವರ್ಷ	*ಒಟ್ಟು ನಷ್ಟ ಲಕ್ಷ ರೂ.ಗಳಲ್ಲಿ*
1987-88	(-) 740.00
1988-89	(-) 1,048-70
1989-90	(-) 1,229-93
ಒಟ್ಟು	**(-) 3,018-63**

ಅ) ಹೌದು, ಮೆ. ಬಲ್ಲೇಸ್ತ ಇಂಡಿಯಾ ಲಿಮಿಟೆಡ್ ಕಂಪನಿಗೆ ಸೋಪು ವಿಸ್ತರಣಾ ಘಟಕದ ಕೆಲಸವನ್ನು ವಹಿಸಲಾಗಿತ್ತು.

ಇ) ಸದರಿ ಕಂಪನಿಯು ಅದು ವಹಿಸಿಕೊಂಡಿದ್ದ ಕೆಲಸವನ್ನು ಸಂಪೂರ್ಣವಾಗಿ ಪೂರೈಸಿಲ್ಲ. ಆದರಿಂದ, ಈ ವಿಷಯವನ್ನು ಅರ್ಬಿಟ್ರೇಷನ್‌ಗೆ ವಹಿಸಿದ್ದು ಅದು ಪ್ರಗತಿಯಲ್ಲಿದೆ.

ಈ) 1983-84 ರಿಂದ ಹೆಚ್ಚು ನಷ್ಟ ಅನುಭವಿಸಲು ಪ್ರಾರಂಭವಾಯಿತು ಮತ್ತು 1989-90ನೇ ಸಾಲಿನವರೆಗೆ ಒಟ್ಟ 6,370–07 ಲಕ್ಷ ರೂ.ಗಳ ನಷ್ಟ ಅನುಭವಿಸಿದೆ.

ಉ) ಇಲ್ಲ. ಈ ವಿಷಯವು ಸರ್ಕಾರದ ಮತ್ತು ಹಣಕಾಸು ಸಂಸ್ಥೆಗಳ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿನ ವಿದ್ಯುತ್ ಕೊರತೆಯ ಪ್ರಮಾಣ

1034 - ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ವಿದ್ಯುತ್ ಕೊರತೆಯ ಪ್ರಮಾಣವೆಷ್ಟು?

ಆ) ಈ ಕೊರತೆಯಿಂದ ರಾಜ್ಯದಲ್ಲಿ ವಿದ್ಯುತ್ ಕಡಿತವನ್ನು ಪ್ರತಿನಿತ್ಯವೂ ಜಾರಿಗೆ ತರಲಾಗಿದೆಯೇ?

ಇ) ಈ ಕೊರತೆಯನ್ನು ನೀಗಲು ಸರ್ಕಾರವು ತಾತ್ಕಾಲಿಕ ಕ್ರಮಗಳನ್ನೇನಾದರೂ ಕೈಗೊಂಡಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ರಾಜ್ಯದಲ್ಲಿನ ವಿದ್ಯುತ್ ಕೊರತೆಯ ಪ್ರಮಾಣ ಪ್ರತಿದನ ಸುಮಾರು 10 ದಶಲಕ್ಷ ಯೂನಿಟ್ಟುಗಳು.

ಆ) ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ದಿನವಹಿ ಆರು ಗಂಟೆಗಳ ಅವಧಿಯ ನಿಯಮಿತ ಲೋಡ್ ಷೆಡ್ಡಿಂಗನ್ನು 22.12.1990 ರಿಂದ ಜಾರಿಗೊಳಿಸಲಾಗಿದೆ.

ಇ) ಕರ್ನಾಟಕ ವಿದ್ಯುತ್ ನಿಗಮವು ರಾಜ್ಯದಲ್ಲಿನ ವಿದ್ಯುತ್ ಕೊರತೆಯನ್ನು ನೀಗಲು ಈಗಾಗಲೇ ಕಾರ್ಯಗತವಾಗುತ್ತಿರುವ 6 ಯೋಜನೆಗಳಲ್ಲದೆ 8ನೇ ಯೋಜನೆಯ ಅವಧಿಯಲ್ಲಿ ಇನ್ನೂ 6 ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಯೋಜಿಸಿದೆ. ಇದಲ್ಲದೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಯಲಹಂಕದಲ್ಲಿ ಒಂದು ಡೀಸೆಲ್ ಜನರೇಟರ್ ಕೇಂದ್ರವನ್ನು ಸ್ಥಾಪಿಸುತ್ತಿದೆ.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಪರವಾನಿಗೆ ಕುರಿತು.

1029 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗಣಿ ಮತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ಸ್ಥಳದಲ್ಲಿ ಮರಳು, ಕಲ್ಲು ಇತ್ಯಾದಿ ತೆಗೆಯಲು ಇಲಾಖೆಯ ಪರವಾನಿಗೆ ಪಡೆಯಬೇಕೆ?

ಆ) ಪಡೆಯಬೇಕಾಗಿದ್ದಲ್ಲಿ ಮಂಗಳೂರು ಜಿಲ್ಲೆಯಲ್ಲಿ ಆ ರೀತಿ ಪರವಾನಿಗೆ ಪಡೆದವರ ವಿಳಾಸ ಮತ್ತು ಸ್ಥಳದ ವಿಸ್ತೀರ್ಣ ಸರ್ವೆ ನಂಬರ್ ಸಹಿತ ವಿವರ ನೀಡುವುದು?

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು)

ಅ) ಹೌದು.

ಆ) ಪಟ್ಟಿಯನ್ನು ಲಗತ್ತಿಸಲಾಗಿದೆ.